**ದಿನಾಂಕಃ 07.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಆರ್ ವಕೀಲರಿಂದಃ**

ನಾನು 2018-2019 ನೇ ಸಾಲಿನಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. 2021-2022 ರಿಂದ ಇಲ್ಲಿಯವರೆಗೂ ನನ್ನ ಪತ್ರ ಬರಹಗಾರರ ಪರವಾನಿಗೆಯು ನವೀಕರಣವಾಗಿರುವುದಿಲ್ಲ. 2019 ರಲ್ಲಿ ನನ್ನ ಪತ್ರ ಬರಹಗಾರರ ಪರವಾನಿಗೆಯನ್ನು ಸಂಬಂಧಪಟ್ಟ ಇಲಾಖೆಯವರು ಸ್ಥಗಿತಗೊಳಿಸಿದ್ದರು ಎಂದರೆ ಸರಿಯಲ್ಲ. ನಿಪಿ-7 ರಿಂದ ನಿಪಿ-11 ರ ಆದಾಯ ತೆರಿಗೆ ಪಾವತಿ ದಾಖಲಾತಿಗಳಲ್ಲಿ ನಮೂದಿಸಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ. ನಿಪಿ-7 ರ ಆದಾಯ ತೆರಿಗೆ ಪಾವತಿಯಲ್ಲಿ ನಮೂದಿಸಿರುವ ಮಲೀಕಾ ಎಂಬುವವರಿಗೆ ರೂ.1,00,000/- ಹಣವನ್ನು ಯಾವ ದಿನಾಂಕದಂದು ನೀಡಿದ್ದೇನೆ ಎಂಬುದನ್ನು ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಆದಾಯ ತೆರಿಗೆ ಪಾವತಿಯಲ್ಲಿ ಸಾಲ ನೀಡಿದ್ದ ದಿನಾಂಕವನ್ನು ನಮೂದು ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-8 ರಿಂದ ನಿಪಿ-11 ರ ಆದಾಯ ತೆರಿಗೆ ಪಾವತಿ ದಾಖಲಾತಿಗಳಲ್ಲಿ ನಿಪಿ-7 ರಲ್ಲಿ ನಮೂದಿಸಿರುವ ಮಲೀಕಾ ಎಂಬ ಹೆಸರಿನ ಸಾಲದ ಹಣವು ಮುಂದುವರೆದಿರುತ್ತದೆ. ನಾನು ಮಲೀಕಾರವರಿಗೆ ಹೊರತುಪಡಿಸಿ ಪ್ರಸಾಧ ಎಂಬುವವರಿಗೂ ಸಹ ಹಣವನ್ನು ಸಾಲವಾಗಿ ನೀಡಿದ್ದೆನು. ಸದರಿ ಹಣವನ್ನು ಪ್ರಸಾಧರವರು ನನಗೆ ಮರುಪಾವತಿಸದೇ ಮರಣ ಹೊಂದಿರುವುದರಿಂದ ನಾನು ಸದರಿ ಪ್ರಸಾಧರವರ ಮಕ್ಕಳ ವಿರುದ್ಧ ಸಿವಿಲ್ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ಸದರಿ ಪ್ರಸಾಧರವರ ವಿರುದ್ಧ ಚೆಕ್ ಬೌನ್ಸ ಪ್ರಕರಣವನ್ನು ದಾಖಲಿಸಿದ್ದೆನು ಆದರೆ ಸದರಿ ಪ್ರಸಾಧರವರು ಸದರಿ ಚೆಕ್ ಬೌನ್ಸ ಪ್ರಕರಣ ಚಾಲ್ತಿಯಲ್ಲಿರುವ ಸಂದರ್ಭದಲ್ಲಿ ಮರಣ ಹೊಂದಿದ್ದರಿಂದ ನಂತರ ಸಿವಿಲ್ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಸಾಧ್ ರವರಿಗೆ ನಾನು ನೀಡಿದ್ದ ಸಾಲದ ಹಣವನ್ನು ನನ್ನ ಆದಾಯ ತೆರಿಗೆ ಪಾವತಿ ದಾಖಲಾತಿಗಳಲ್ಲಿ ನಮೂದಿಸಿರುವುದಿಲ್ಲ.

2018-2019 ರಿಂದ ನನ್ನ ಪತ್ರ ಬರಹಗಾರರ ಪರವಾನಿಗೆಯು ನವೀಕರಣವಾಗದಿದ್ದರಿಂದ ನಿಮಗೆ ಬೇರೆ ಯಾವ ಮೂಲದಿಂದ ಆದಾಯ ಬರುತ್ತಿತ್ತು ಎಂದರೆ ಸಾಕ್ಷಿದಾರರು ನಾನು ಬೇರೆ ಪತ್ರ ಬರಹಗಾರರ ಮೂಲಕ ದಾಖಲಾತಿಗಳನ್ನು ತಯಾರಿಸಿ ನೋಂದಣಿ ಮಾಡಿಸುತ್ತಿದ್ದೆನು ಎಂದು ನುಡಿಯುತ್ತಾರೆ. 2018-2019 ರಿಂದ ನಾನು ಯಾವುದೇ ಪತ್ರ ಬರಹಗಾರರ ಕೆಲಸವನ್ನು

ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಿಂದ ನಿಪಿ-11 ರ ದಾಖಲಾತಿಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ತಿ.ನರಸೀಪುರದಲ್ಲಿ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದರೂ ಸಹ ನನ್ನ ಆದಾಯ ತೆರಿಗೆ ದಾಖಲಾತಿಗಳಲ್ಲಿ ಬಾಡಿಗೆ ಮನೆ ಎಂದು ಸುಳ್ಳಾಗಿ ನಮೂದಿಸಿದ್ದೇನೆ ಎಂದರೆ ಸಾಕ್ಷಿದಾರರು 2023 ರವರೆಗೂ ನಾನು ಬಾಡಿಗೆ ಮನೆಯಲ್ಲಿ ಇದ್ದೆನು. 2023 ರಿಂದ ಸ್ವಂತ ಮನೆಯನ್ನು ಕಟ್ಟಿಸಿಕೊಂಡು ವಾಸಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಮಲೀಕಾ ಮತ್ತು ಪ್ರಸಾಧರವರಿಗೆ ಹಣವನ್ನು ಸಾಲವಾಗಿ ಕೊಟ್ಟಿದ್ದು ನಿಜವಾಗಿದ್ದರೇ ನಿಪಿ-7 ರಿಂದ 11 ಆದಾಯ ತೆರಿಗೆ ಪಾವತಿ ದಾಖಲಾತಿಗಳಲ್ಲಿ ಮಲೀಕಾ ಎಂಬ ಹೆಸರನ್ನು ನಮೂದಿಸಿದ್ದ ಹಾಗೇ ಪ್ರಸಾಧರವರ ಹೆಸರಿನಲ್ಲಿ ರೂ.4,00,000/- ಸಾಲವನ್ನು ನೀಡಿದ್ದೇನೆ ಎಂದು ಸಹ ನಮೂದಿಸುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಫಿರ್ಯಾಧಿಯಲ್ಲಿ ಹೇಳಿದಂತೆ ಆರೋಪಿಗೆ ರೂ.1,00,000/- ಹಣವನ್ನು ಸಾಲವಾಗಿ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮವಾಗಿ ಹಣವನ್ನು ವಸೂಲಿ ಮಾಡುವ ಉದ್ದೇಶದಿಂದ ನಿಪಿ-7 ರಿಂದ 11 ದಾಖಲಾತಿಗಳಲ್ಲಿ ಆರೋಪಿಯ ಹೆಸರನ್ನು ಕಾನೂನುಬಾಹಿರವಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.10,000/- ಹಣವನ್ನು ಮಾತ್ರ ಸಾಲವಾಗಿ ನೀಡಿದ್ದರಿಂದ ಸದರಿ ಹಣವನ್ನು ಆರೋಪಿಯು ಮರುಪಾವತಿಸಲು ಇಂದಿಗೂ ತಯಾರಿದ್ದಾರೆ ಎಂದರೆ ಸಾಕ್ಷಿದಾರರು ಆರೋಪಿಯು ನನ್ನ ಬಳಿ ರೂ.1,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.